**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. 101/2019**

| | | |
|---|---|---|
| ಸಾಕ್ಷಿಯ ಹೆಸರುಃ | ಆನಂದಕುಮಾರ್.ಎನ್.ಟಿ. | ಫ್ರಾಸಾಃಃ 4 |
| ತಂದೆಯ ಹೆಸರುಃ | ತಮ್ಮೇಗೌಡ | ಚಾಸಾಃಃ 9 |
| ವಯಸ್ಸುಃ | 50 ವರ್ಷ | ಪ್ರಮಾಣೀಕರಿಸಿದ<br>ದಿಃ 08.04.2026 |
| ಉದ್ಯೋಗಃ | ಸೂಪರಿಟೆಂಡೆಂಟ್, ನೆಲಮಂಗಲ<br>ಟಾಯಿಟ್ ಬ್ರೀವರೀಸ್ | |
| ವಾಸಸ್ಥಳಃ | ನೆಲಮಂಗಲ | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ಆಗಸ್ಟ್-2016 ರಿಂದ ಜೂನ್-2020 ರವರೆಗೆ ಅಬಕಾರಿ ಉಪ ಆಯುಕ್ತರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ31/03/2018 ರಂದು ನಾನು, ಚಾಸಾ-3, 4 ಮತ್ತು 5 ರವರೊಂದಿಗೆ ಕುಂದನಹಳ್ಳಿ ಗ್ರಾಮದ ಬಿ.ಎಂ.ರಸ್ತೆಯಲ್ಲಿ ಗಸ್ತಿನಲ್ಲಿದ್ದಾಗ ಹಳೆಯೂರು ಗ್ರಾಮ ಬೈಲಕುಪ್ಪೆ ಯಲ್ಲಿ ಮಂಜುನಾಥ ಎಂಬುವವರು ಅಕ್ರಮವಾಗಿ ಮದ್ಯವನ್ನು ಹೊಂದಿ, ಮಾರಾಟ ಮಾಡುತ್ತಿದಾರೆಂದು ಬಾತ್ಮಿ ಬಂದಿರುತ್ತದೆ. ಸದರಿ ವಿಷಯವನ್ನು ನಮಗೆ ತಿಳಿಸಿದರು. ನಾವು ಮಧ್ಯಾಹ್ನ 3.15 ಗಂಟೆಗೆ ಸದರಿ ಸ್ಥಳಕ್ಕೆ ತೆರಳಿದೆವು. ಅಲ್ಲಿ ರಸ್ತೆಯಲ್ಲಿದ್ದ ಸಾರ್ವಜನಿಕರು ನಮ್ಮ ಜೀಪನ್ನು ನೋಡಿ ಹತ್ತಿರ ಬಂದರು. ಅವರಿಗೆ ನಾನು ಬಂದ ಮಾಹಿತಿ ತಿಳಿಸಿ, ಪಂಚರಾಗಲು ಕೋರಿಕೊಂಡ ಮೇರೆಗೆ, ಅವರ ಪೈಕಿ ಚಾಸಾ-1 ಮತ್ತು 2 ರವರು ಒಪ್ಪಿ ಮುಂದೆ ಬಂದಿರುತ್ತಾರೆ. ಅವರಿಗೆ ಪಂಚರಾಗಲು ನೋಟೀಸು

ಜಾರಿಮಾಡಲಾಯಿತು. ನಂತರ ಅವರೊಂದಿಗೆ ಆಸಾಮಿಯ ಮನೆಯ ಹತ್ತಿರ ಹೋದೆವು. ಅವರಿಗೆ ನಾವು ಬಂದ ವಿಷಯವನ್ನು ತಿಳಿಸಿ, ಸ್ಥಳ ಪರಿಶೀಲನೆ ಮಾಡಲು ಮಾನ್ಯ ಘನ ನ್ಯಾಯಾಲಯದ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ, ಕರ್ನಾಟಕ ಅಬಕಾರಿ ಕಾಯ್ದೆ 54 ರಂತೆ ಸ್ಥಳದಲ್ಲಿ ಶೋಧನಾ ವಾರೆಂಟ್ ತಯಾರಿಸಿ ಪಂಚರ ಸಮಕ್ಷಮ ಪರಸ್ಪರ ಅಂಗಶೋಧಿಸಿಕೊಂಡು ಪರಿಶೀಲನೆಗೆ ತೊಡಗಿದೆವು. ಆರೋಪಿತ ಮನೆಯ ಆರ್.ಸಿ.ಸಿ ಮನೆಯಾಗಿದ್ದು, ಸದರಿ ಮನೆಯ ಬಲಭಾಗದ ಜಗುಲಿಗೆ ಹೊಂದಿಕೊಂಡಂತೆ ಒಂದು ಕೋಣೆಯಿತ್ತು. ಅದರಲ್ಲಿ ಒಂದು ಮರದ ಮಂಚವಿದ್ದು, ಮಂಚದ ಕೆಳಗೆ ಒಂದು ಬಿಳಿ ಬಣ್ಣದ ಬಟ್ಟೆಯ ಕೈ ಚೀಲ ಇರುವುದು ಕಂಡುಬಂದಿರುತ್ತದೆ. ಅದನ್ನು ಅಲ್ಲೇ ಪಂಚರ ಸಮಕ್ಷಮ ತೆರೆದು ನೋಡಲಾಗಿ, ಅದರಲ್ಲಿ 90 ಎಂಎಲ್ ನ 24 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಪ್ಯಾಕೇಟ್‌ಗಳು ಹಾಗೂ 90 ಎಂ.ಎಲ್.ನ 13 ಒಲ್ಡ್ ಟಾವೆರಿನ್ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು ಇದ್ದವು. ಒಟ್ಟು 3.330 ಲೀ. ಮದ್ಯ ಇರುವುದು ಕಂಡುಬಂದಿರುತ್ತದೆ. ನಾನು ಆತನಿಗೆ ಸದರಿ ಮದ್ಯವನ್ನು ಹೊಂದಲು ರಹದಾರಿ ಇದೆಯೇ ಎಂದು ಕೇಳಲಾಗಿ ಇಲ್ಲವೆಂದು ತಿಳಿಸಿರುತ್ತಾರೆ. ಅದರ ಭದ್ರತಾ ಚೀಟಿ ಸಂಖ್ಯೆಗಳು ಹರಿದಿತ್ತು. ಆಸಾಮಿಯ ಹೆಸರು ವಿಳಾಸ ಕೇಳಲಾಗಿ ಮಂಜುನಾಥ ಬಿನ್ ರಂಗಸ್ವಾಮಿ, 31 ವರ್ಷ, ಬೈಲಕುಪ್ಪೆ ಹಳೆಯೂರು ಗ್ರಾಮ ಎಂದು ತಿಳಿಸಿರುತ್ತಾರೆ. ನಂತರ ಈ ರೀತಿ ಅಕ್ರಮ ಮದ್ಯವನ್ನು ಹೊಂದುವುದು ಅಬಕಾರಿ ಕಾಯಿದೆಯನ್ವಯ ಅಪರಾಧ ಎಂದು ತಿಳಿಸಿರುತ್ತೇವೆ. ನಂತರ ದೊರೆತ ಆಸಾಮಿ ಮತ್ತು ಮದ್ಯವನ್ನು ಇಲಾಖಾ ವಶಕ್ಕೆ ಪಡೆದುಕೊಂಡು, ದೊರೆತ ಎಲ್ಲಾ ಮದ್ಯವನ್ನು ರಾಸಾಯಿನಿಕ ಪರೀಕ್ಷೆಗಾಗಿ ಚೀಲಕ್ಕೆ ಹಾಕಿ ಬಿಳಿ ಬಟ್ಟೆಯಲ್ಲಿ ಸುತ್ತಿ, ದಾರದಿಂದ ಕಟ್ಟಿ 298 ಎಂದು ಇಲಾಖಾ ಸೀಲನ್ನು ಅರಗಿನ ಸಹಾಯದಿಂದ ಗಂಟಿನ ಮೇಲೆ ಮುದ್ರೆ ಮಾಡಲಾಯಿತು. ನಂತರ ಗುರುತಿನ ಚೀಟಿ ಮತ್ತು ಮಾದರಿ ಚೀಟಿಗಳನ್ನು ತಯಾರಿಸಿ, ಪಂಚರ ಸಹಿ ಪಡೆದು ಮಾದರಿ ತೆಗೆದ ಚೀಲದ ಮೇಲೆ ಅಂಟಿಸಲಾಯಿತು. ನಂತರ ಆರೋಪಿತನನ್ನು ದಸ್ತಗಿರಿಗೊಳಿಸಲಾಯಿತು. ಸ್ಥಳದಲ್ಲಿ ಮಹಜರ್ ಕ್ರಮವನ್ನು ಪಂಚರ ಸಮಕ್ಷಮ ಸಂಜೆ

3.15 ರಿಂದ 4.15 ಗಂಟೆಯವರೆಗೆ ನನ್ನ ಕೈಬರವಣಿಗೆಯಲ್ಲಿ ಬರೆಯಲಾಯಿತು. ಆರೋಪಿತನನ್ನು ನಾನು ಸ್ವ ವರದಿಯನ್ನು ತಯಾರಿಸಿ, ನನ್ನ ಸ್ವ ವರದಿಯ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಅಮಾನತ್ತು ಪಡಿಸಿಕೊಂಡ ಮಾಲುಗಳನ್ನು ಮಾಲು ಪಟ್ಟಿಗೆ ಅಳವಡಿಸಿಕೊಂಡು ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪಂಚರ ಮತ್ತು ಸಿಬ್ಬಂದಿಗಳ ಹೇಳಿಕೆಗಳನ್ನು ಹಾಗೂ ಆರೋಪಿತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಆರೋಪಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ-10 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ.

3. ಸಾಕ್ಷಿಯು ನಿಪಿ.1-ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.2-ಮಾಲು ಪಟ್ಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.3-ಮಾದರಿ ಮೊಹರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.3(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಶೋಧನಾ ಸಮುಚಿತ ಆಧಾರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.9** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.9(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.10** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.10(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.11** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.11(ಎ)** ಎಂದು ಗುರುತಿಸಲಾಯಿತು.

4. ಆ ದಿನ ವಶಪಡಿಸಿಕೊಂಡ ಮಾಲುಗಳು ಈಗ ನ್ಯಾಯಾಲಯದ ಮುಂದಿರುತ್ತವೆ. ಅವುಗಳ ಪೈಕಿ 90 ಎಂ.ಎಲ್.ನ 24 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳನ್ನು ಈಗಾಗಲೇ ಮು.ಮಾ.1 ಎಂದು, 90 ಎಂ.ಎಲ್.ನ 3 ಒಲ್ಡ್ ಟಾವೆರಿನ್ ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿದೆ. ಆರೋಪಿತ ಈ ದಿನ ಗೈರುಹಾಜರಿದ್ದು, ಆತನ ಗುರುತಿನ ಬಗ್ಗೆ ತಕರಾರು ಮಾಡಿರುವುದಿಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಬಿ ಎಸ್ ವಕೀಲರಿಂದಃ</u>**

5. ಮಾಹಿತಿ ಬಂದಾಗ ನಾವು ಕುಂದನಹಳ್ಳಿ ಗ್ರಾಮದ ಸರ್ಕಲ್ ನಲ್ಲಿ ಗಸ್ತು ಮಾಡುತ್ತಿದ್ದೆವು. ಆಗ ಸಮಯ 2.45 ಗಂಟೆಯಾಗಿತ್ತು. ಕುಂದನಹಳ್ಳಿ ಸರ್ಕಲ್ ಗೂ ಬೈಲಕುಪ್ಪೆಗೂ 6-7 ಕಿ.ಮೀ ಅಂತರ ಇದೆ. ಘಟನಾ ಸ್ಥಳಕ್ಕೆ ತಲುಪಲು 20 ನಿಮಿಷ ಬೇಕಾಗುತ್ತದೆ. ಕುಂದನಹಳ್ಳಿ ಸರ್ಕಲ್ ನಲ್ಲಿ ಮಾಹಿತಿಯನ್ನು ವಿಚಾರಿಸಿ 10-15 ನಿಮಿಷಗಳ ನಂತರ ಸ್ಥಳ ವನ್ನು ಬಿಟ್ಟೆವು. ನಾವು ಸ್ಥಳಕ್ಕೆ ಹೋದಾಗ ಮಧ್ಯವನ್ನು ಖರೀದಿಸುವ ಖರೀದಿದಾರರು ಇರಲಿಲ್ಲ. ಆ ದಿನ ಆರೋಪಿತ ಮಧ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಧ್ಯದ ಟೆಟ್ರಾ ಪ್ಯಾಕೇಟ್‌ಗಳ ಬ್ಯಾಚ್ ಸಂಖ್ಯೆ ಹೇಳಲಾಗುವುದಿಲ್ಲ. ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿದರೆ ತಯಾರಿಕಾ ಕಂಪನಿಯ ಹೆಸರನ್ನು ತಿಳಿಸಬಹುದು. ಮುದ್ದೇಮಾಲುಗಳ ಮೇಲೆ ನನ್ನ ಸಹಿ ಇಲ್ಲ. ಆ ದಿನ ಯಾವುದೇ ಮುದ್ದೇಮಾಲುಗಳನ್ನು ನಾವು ವಶಪಡಿಸಿಕೊಂಡಿಲ್ಲ, ಅದ್ದರಿಂದ ನನ್ನ ಸಹಿ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಕ್ಕೋಸ್ಕರ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳ ಆರೋಪಿತನಿಗೆ ಸೇರಿದ್ದಲ್ಲ ತನಿಖಾಧಿಕಾರಿ ತನಿಖೆ ಮಾಡಿರುತ್ತಾರೆಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಮಹಜರನ್ನು ಮತ್ತು ಮುದ್ದೇಮಾಲುಗಳನ್ನು ಠಾಣೆಯಲ್ಲಿ ಸೃಷ್ಟಿಸಿದ್ದೇವೆ

ಎಂದರೆ ಸರಿಯಲ್ಲ. ಆರೋಪಿತನಿಗೆ ಅನಾನೂಕೂಲ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.